ಇನ್ನುಳಿದವರು ಮಲಗಿರುವಾಗ, ಕೈಲಾಸಬಾಬುವಿನ ಮನೆಯ ಮುಂದೆ ಒಂದು ಕುದುರೆ ಸಾರೋಟು ಬಂದು ನಿಂತಿತು. ಪೋಷಾಕು ಧರಿಸಿದ್ದ ಇಬ್ಬರು ಸೇವಕರು ಕಟ್ಟೆಗಳನ್ನೇರಿ ಮೇಲೆ ಬಂದು, ''ಛೋಟಾ ಲಾರ್ಡ್ ಸಾಹೀಬ್ ಹಾಜಿರ ಹೈ'' ಎಂದು ದೊಡ್ಡ ದನಿಯಲ್ಲಿ ಘೋಷಿಸಿದರು. ಕೈಲಾಸ ಬಾಬು ತನ್ನ ಹಳೆಯ ಪಾರಂಪಾರಿಕ ರಾಜಪೋಷಾಕು ಹಾಗೂ ಮುಂಡಾಸು ಧರಿಸಿ ಆತನಿಗಾಗಿ ದಾರಿಕಾಯುತಲಿದ್ದ. ಆ ವಿಶಿಷ್ಟ ಸಂದರ್ಭಕ್ಕೆ ತಕ್ಕಂತೆ, ತನ್ನ ಒಡೆಯ ಕೊಟ್ಟಿದ್ದ ಅತ್ಯುತ್ತಮ ಉಡುಪು ಧರಿಸಿದ್ದ ಗಣೇಶ ಆತನ ಬದಿಗೆ ನಿಂತಿದ್ದ. ಛೋಟಾ ಲಾರ್ಡ್ ಸಾಹೀಬ ಬಂದರೆಂಬ ಉದ್ಘೋಷ ಕೇಳಿದವನೇ ಕೈಲಾಸ ಬಾಬು ತೇಕುತ್ತ, ಗೂರುತ್ತ, ನಡುಗುತ್ತ, ಓಡೋಡಿ ಬಾಗಿಲ ಬಳಿಗೆ ಬಂದ. ನಂತರ, ಛೋಟಾ ಸಾಹಿಬನ ವೇಷದಲ್ಲಿದ್ದ ನನ್ನ ಗೆಳೆಯನನ್ನು ಬರಮಾಡಿಕೊಂಡು, ಪ್ರತಿ ಹೆಜ್ಜೆಗೂ

